PAPERS LAID ON THE TABLE

SRI M. VEERAPPA MOILY (Hon. Minister for Finance).—I beg to lay.—

REPORT OF THE COMPTROLLER AND AUDITOR GENERAL OF INDIA FOR THE YEAR 1978-79 (COMMERCIAL), GOVERNMENT OF KARNATAKA

as required under Article 151(2) of the Constitution of India

SRI M. M. J. SADYOJATHA (Minister for Transport and Minor Irrigation).—I beg to lay.—

A copy of the Report of the Committee of Legislators regarding Revision of Fares proposed by the K.S.R.T.C.

MR. SPEAKER (Reports laid).—Before I go to the next item of the agenda, the hon. Member Sri P. Ramdev had given a notice under 312. But the hon. Minister for Finance wants to make a statement. After hearing the statement if you still feel some supplementaries are necessary you can ask. To facilitate you the hon. Minister for Finance himself has come forward to make a statement.

Statement by Minister

re : Financial Position of the State

† ಶ್ರೀ ಎಂ. ವೀರಪ್ಪ ಮೊಯಿಲಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯ ರಾದಂತ ಶ್ರೀ ರಾಮದೇವ್‌ರವರು ಕಳುಹಿಸಿದಂಥ ನೋಟೀಸ್‌ಗೆ ಉತ್ತರವನ್ನು ಹೇಳಲಿಕ್ಕೆ ಇಷ್ಟ ಪಡುತ್ತೇನೆ.

ಮಾನ್ಯರೆ, ನಮ್ಮ ರಾಜ್ಯದ ಹಣಕಾಸು ವ್ಯವಸ್ಥೆ ಸಧ್ಯದಲ್ಲಿ ಓವರ್ ಡ್ರಾಫ್ಟ್ ಪರಿಸ್ಥಿತಿಯನ್ನು ಮುಟ್ಟಿಲ್ಲವೆಂದು ಮಾನ್ಯ ಸದಸ್ಯರಿಗೂ ಹಾಗೂ ಈ ಸದನಕ್ಕೂ ನಾನು ಸ್ಪಷ್ಟವಾಗಿ ತಿಳಿಸಬಯಸುತ್ತೇನೆ. ನಾವು ಜನವರಿ ೧೯೮೦ರಲ್ಲಿ ಆಡಳಿತವನ್ನು ವಹಿಸಿಕೊಂಡಾಗಲಿಂದ ನಮ್ಮ ರಾಜ್ಯದ ಹಣಕಾಸು ಸ್ಥಿತಿ ೧೦೦ ಕೋಟಿ ರೂಪಾಯಿಗಳ ಓವರ್ ಡ್ರಾಫ್ಟ್ ಮುಟ್ಟುವ ಪರಿಸ್ಥಿತಿ ಎಂದಿಗೂ ಬರಲಿಲ್ಲ. ಸಾಮಾನ್ಯವಾಗಿ ಪ್ರತಿ ರಾಜ್ಯದಲ್ಲಿಯೂ ವೆಚ್ಚ ಹಾಗೂ ಆದಾಯ ಒಂದೊಂದು ಸಲ ಹೊಂದಿಕೊಂಡು ಹೋಗದಂತಹ ಪರಿಸ್ಥಿತಿ ಇದ್ದರೂ ಇರುತ್ತದೆ. ಇಂತಹ ಹಂಗಾಮೀ ಪರಿಸ್ಥಿತಿ ಅಥವಾ ವ್ಯಸ್ತ ಪ್ರಮಾಣದ ಬೆಳವಣಿಗೆಗೆ ಮೂಲ ಕಾರಣವೆಂದರೆ, 'ಯೋಜನೆಗಳ' ಬಗೆಗೆ ಕೇಂದ್ರ ಸರ್ಕಾರದಿಂದ ಬರುವ ಧನ ಸಹಾಯದಲ್ಲಿ ಅನಿವಾರ್ಯವಾಗಿ ಆಗುವ ವಿಳಂಬ ಇಲ್ಲವೆ, ಕೇಂದ್ರ ಮಂಜೂರು ಮಾಡಿದ ಕೋಸಕ್ಕೆ ನಾವು ಮಾಡಿದ ವೆಚ್ಚವನ್ನು ಸಕಾಲದಲ್ಲಿ ತುಂಬುವುದಕ್ಕೆ ಆಗದೆ ಇರುವುದು. ಉದಾಹರಣೆಗೆ ಹೇಳಬೇಕೆಂದರೆ, ಈಗ ನಮ್ಮ ರಾಜ್ಯದ ೧೦೦ ತಾಲ್ಲೂಕುಗಳು ಬರಗಾಲ ಪೀಡಿತವಾಗಿವೆ. ಈ ಬರಗಾಲ ನಿವಾರಣೆಗಾಗಿ ರಾಜ್ಯ ಸರ್ಕಾರ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರದ ಸಮತೂಕದ ನೆರವನ್ನು ಅಪೇಕ್ಷಿಸಿ, ಕಾರ್ಯಗತಗೊಳಿಸುವ ಸಲುವಾಗಿ ವೆಚ್ಚ ಮಾಡುತ್ತಿದೆ. ಅದೇ ರೀತಿಯಾಗಿ ಹೊನ್ನಾವರ ಹಾಗೂ ಇನ್ನಿತರ ತಾಲ್ಲೂಕುಗಳಲ್ಲಿ ೧೯೮೦ರ ಜುಲೈ ತಿಂಗಳಲ್ಲಿ ನೆರೆ ಹಾವಳಿಗೆ ಬಲಿಬಿದ್ದ ಜನತೆಗೆ ನಮ್ಮ ಸರ್ಕಾರ ಕೇಂದ್ರ ಸರ್ಕಾರದ ನೆರವನ್ನು ಅಪೇಕ್ಷಿಸಿ ವೆಚ್ಚ ಮಾಡಿದೆ. ಈ ಜನ ಹಿತದ ಕೆಲಸಗಳು ತಕ್ಷಣವೇ ಆಗಬೇಕಾದುದು ಅನಿವಾರ್ಯ. ಆದಕ್ಕಾಗಿ ನಾವು ಕೇಂದ್ರದ ಸಹಾಯ ಬರುವವರೆಗೆ ಕಾಯುವಂತಿಲ್ಲ. ಅದೇ ರೀತಿಯಲ್ಲಿ ಸಕ್ಕರೆಯ ಲೆವಿ ಮುಖ್ಯ ನ್ಯಾಯಾಲಯದಲ್ಲಿ ಎರಡು ವರುಷಗಳಿಂದಲೂ ಈ ಪ್ರಶ್ನೆ ಇತ್ಯರ್ಥವಾಗದೇ ಇದ್ದುದರಿಂದ